ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಕೊರಚರ ನಾಗರಾಜ @ ಎರಡೆತ್ತಿನ ಹಳ್ಳಿ ನಾಗ-ವಿರುದ್ಧ ರಾಜ್ಯ ಸರ್ಕಾರ

ಕ್ರಿಮಿನಲ್ ಪುನರೀಕ್ಷಣಾ ಅರ್ಜಿಸಂಖ್ಯೆ: 562/2011, ದಿನಾಂಕ 13 ನೇ ರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಐಪಿಸಿ ಸೆಕ್ಷನ್ 420 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಸಿ.ಸಿ.ಸಂಖ್ಯೆ:445/2008 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅಪೀಲನ್ನು ವಜಾಗೊಳಿಸಿ, ನೀಡಿದ ಅಪರಾಧ ನಿರ್ಣಯದ ತೀರ್ಪನ್ನು ಹಾಗೂ ಶಿಕ್ಷೆಯ ಆದೇಶವನ್ನು ದೃಢಪಡಿಸಿ ಕ್ರಿಮಿನಲ್ ಅಪೀಲುಸಂಖ್ಯೆ: 103/2009ದಿನಾಂಕ: 10.1.2011 ರಲ್ಲಿ ಅಪೀಲು ನ್ಯಾಯಾಲಯವು ನೀಡಿದ ತೀರ್ಪನ್ನು ಪ್ರಶ್ನಿಸಿ, 1 ನೇ ಆರೋಪಿಯು ಈ ಅರ್ಜಿಯನ್ನು ಸಲ್ಲಿಸಿದ್ದಾನೆ.ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ 1 ನೇ ಆರೋಪಿಗೆ ಮೂರು ವರ್ಷಗಳ ಅವಧಿಗೆ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ಮತ್ತು 3,000/- ರೂ.ಗಳ ದಂಡವನ್ನು ವಿಧಿಸಲಾಗಿದೆ.ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗಾಗಿ 2 ನೇ ಆರೋಪಿ ಪರಮೇಶಿಯನ್ನು ಖುಲಾಸೆಗೊಳಿಸಿದ್ದು, ಅದನ್ನು ಅಧಿವಿಚಾರಣಾ ನ್ಯಾಯಾಲಯವು ನೀಡಿದ ಅಪರಾಧ ನಿರ್ಣಯದ ತೀರ್ಪಿನ ಹಾಗೂ ಶಿಕ್ಷೆಯ ಆದೇಶದ ಪ್ರಧಾನ ಭಾಗದಲ್ಲಿ ವ್ಯಕ್ತಪಡಿಸಲಾಗಿದೆ.1 ನೇ ಆರೋಪಿಯು ದಂಡದ ಮೊತ್ತವನ್ನು ಪಾವತಿಸಲು ತಪ್ಪಿದಲ್ಲಿ, ಅವನು ಇನ್ನೂ ಆರು ತಿಂಗಳುಗಳ ಅವಧಿಗೆ ಸಾದಾ ಕಾರಾಗೃಹವಾಸವನ್ನು ಅನುಭವಿಸಬೇಕಾಗಿತ್ತು.

2. ಈ ಅರ್ಜಿಯ ವಾಸ್ತವಿಕ ಸಂಗತಿಗಳು ಈ ಕೆಳಗಿನಂತಿವೆ:

ದೂರುದಾರನಾದ ಶಿವರಾಜ್ ಗುಲ್ಬರ್ಗಾ ಜಿಲ್ಲೆಯ, ಜೇವರ್ಗಿ ತಾಲ್ಲೂಕಿನ, ದೇವನಹಳ್ಳಿ ಗ್ರಾಮದ ಖಾಯಂ ನಿವಾಸಿಯಾಗಿದ್ದು, ಅವನು ಎದುರುದಾರ ಪೊಲೀಸರ ಮುಂದೆ ಈ ಮುಂದಿನಂತೆ ದೂರು ದಾಖಲಿಸಿದ್ದಾನೆ.ಅವನಿಗೆ ಆರೋಪಿಗಳಾದ ಎಂದರೆ, ಕೊರಚರ ನಾಗರಾಜ @ ಎರಡೆತ್ತಿನಹಳ್ಳಿ ನಾಗನು ತನ್ನ ಬಳಿ ಚಿನ್ನವಿರುವುದಾಗಿ ತಿಳಿಸಿ ಮೊಬೈಲ್ ಕರೆಯನ್ನು ಮಾಡಿ ಅವನು ತನ್ನಿಂದ ಚಿನ್ನವನ್ನು ಖರೀದಿಸುವಂತೆ ಕೇಳಿಕೊಂಡ.ದೂರುದಾರನು ಈ ಸಂಗತಿಯನ್ನು ಅದೇ ಗ್ರಾಮದ ತನ್ನ ಆಪ್ತ ಸ್ನೇಹಿತನಾದ ಮಲ್ಲಿನಾಥ್ಗೆ ತಿಳಿಸಿದ್ದಾನೆ.ತರುವಾಯ, ಹಡಗಲಿಗೆ D ಬಂದ ದೂರುದಾರನು 500/- ರೂ.ಗಳ ಲೆಕ್ಕದಲ್ಲಿ, ಆರೋಪಿಗಳಿಂದ ಎರಡು ಚಿನ್ನದ ತುಂಡುಗಳನ್ನು ಖರೀದಿಸಿದನು ಮತ್ತು ಖರೀದಿಸಿದ ನಂತರ, ದೂರುದಾರ ಮತ್ತು ಅವನ ಸ್ನೇಹಿತ ಮಲ್ಲಿನಾಥ್, ಆರೋಪಿಯಿಂದ ಮಾರಾಟವಾಗಿದೆಯೆಂದು ಹೇಳಲಾದ ಚಿನ್ನದ ಎರಡು ತುಂಡುಗಳ ಅಸಲಿತನವನ್ನು ಖಚಿತಪಡಿಸಿಕೊಳ್ಳಲು ಜೇವರ್ಗಿಗೆ ಹೋದರು.

3. ಅಷ್ಟೇ ಅಲ್ಲದೆ, ಆರೋಪಿಯು ತನ್ನ ಬಳಿಯಿದ್ದ ಉಳಿದ ಚಿನ್ನವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಾನೆ ಎಂದು ಹೇಳಲಾಗಿದೆ.ಮತ್ತೊಮ್ಮೆ ಅವನು ತನ್ನ ಬಳಿಯಿದ್ದ ಉಳಿದ ಚಿನ್ನವನ್ನು ಖರೀದಿಸುವಂತೆ ದೂರುದಾರರನ್ನು ಒತ್ತಾಯಿಸಿದ ಮತ್ತು ಈ ಮೊದಲು ಅವನು ದೂರುದಾರರಿಗೆ ನೀಡಿದ್ದ ಚಿನ್ನದ ಅಸಲಿತನವನ್ನು ನಂಬುವಂತೆ ಸಹ ಮಾಡಿದನು.ಆರೋಪಿಯ ವಶದಲ್ಲಿದ್ದ ಉಳಿದ ಚಿನ್ನವನ್ನು ಖರೀದಿಸಲು

ದೂರುದಾರ ಮತ್ತು ಆತನ ಸ್ನೇಹಿತ ಮತ್ತೆ ಹಡಗಲಿಗೆ ಬಂದರು.ಅದರಂತೆ,ದಿನಾಂಕ: 24.05.2007 ರಂದು ದೂರುದಾರರು ಆರೋಪಿಯಿಂದ 950 ಗ್ರಾಂ ತೂಕದ ಚಿನ್ನದ ತುಂಡುಗಳನ್ನು ಖರೀದಿಸಿ ಅದಕ್ಕೆ ಪ್ರತಿಯಾಗಿ, ದೂರುದಾರನು 1,20,000/- ರೂ. ಗಳನ್ನು ಆರೋಪಿಗೆ ಪಾವತಿಸಿದ.ಆರೋಪಿಯಿಂದ ಖರೀದಿಸಲಾಗಿದೆ ಎಂದು ಹೇಳಲಾದ ಚಿನ್ನದ ವಸ್ತುಗಳ ಅಸಲಿತನವನ್ನು ಪರೀಕ್ಷಿಸಲು ದೂರುದಾರನು ಮತ್ತೆ ಜೇವರ್ಗಿಯ ಆಭರಣ ಮಳಿಗೆಗೆ ಹೋದ. ತರುವಾಯ, ಆರೋಪಿಯು ನಕಲಿ ಚಿನ್ನವನ್ನು ಮಾರಾಟ ಮಾಡಿದ್ದಾನೆ ಎಂದು ದೂರುದಾರನಿಗೆ ತಿಳಿಯಿತು.ಆದ್ದರಿಂದ ದೂರುದಾರನು, ಎದುರುದಾರ-ಪೊಲೀಸರ ಬಳಿ ಹೋಗಿ ದೂರು ದಾಖಲಿಸಿದ.ದೂರುದಾರನು ದಾಖಲಿಸಿದ ದೂರನ್ನು ಅನುಸರಿಸಿ, ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗಾಗಿ ಆರೋಪಿಗಳ ವಿರುದ್ಧ ಕ್ರಿ.ಸಂ .31/2007 ರಲ್ಲಿ ಮೊಕದ್ದಮೆಯನ್ನು ದಾಖಲಿಸಲಾಯಿತು.

4. ತರುವಾಯ, ತನಿಖಾಧಿಕಾರಿಯು ಈ ಮೊಕದ್ದಮೆಯನ್ನು ತನಿಖೆಗಾಗಿ ಕೈಗೆತ್ತಿಕೊಂಡು, ಸಾಕ್ಷಿಗಳ ಹೇಳಿಕೆಯನ್ನು ದಾಖಲಿಸುವ ಮೂಲಕ ಮೊಕದ್ದಮೆಯನ್ನು ಕೂಲಂಕಷವಾಗಿ ತನಿಖೆ ಮಾಡಿದರು ಮತ್ತು ಅದೇ ರೀತಿ ಸ್ಥಳ (ಸ್ಪಾಟ್) ಮಹಜರು ಮತ್ತು ಜಪ್ತಿ (ಸೀಜರ್) ಮಹಜರನ್ನು ಸಹ ನಡೆಸಿದರು ಮತ್ತು ಇದರಲ್ಲಿನ ಅರ್ಜಿದಾರನಿಗೆ ಎಂದರೆ, ಕೊರಚರ ನಾಗರಾಜ @ ಎರಡೆತ್ತಿನ ಹಳ್ಳಿ ನಾಗನಿಗೆ ಸಂಬಂಧಿಸಿದಂತೆ, ಸಿ.ಸಿ.ಸಂಖ್ಯೆ: 30/2008 ರಲ್ಲಿ ಚಾರ್ಜ್ಶೀಟ್ ಹಾಕಿದರು.ಆರೋಪಿಯ ವಿರುದ್ಧ ಚಾರ್ಜ್ಶೀಟ್ ಹಾಕಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಆತನ ವಿರುದ್ಧ ಆರೋಪವನ್ನು ರೂಪಿಸಿತು.ಆದರೆ ಆರೋಪದಲ್ಲಿ ಆರೋಪಿಯು ತನ್ನೊಪ್ಪಿಕೊಂಡಿಲ್ಲ.ಆದರೆ, ಅಧಿವಿಚಾರಣೆ ಮಾಡಬೇಕೆಂದು ಕ್ಲೇಮು ಮಾಡಿದ್ದಾನೆ.ಅದರಂತೆ, ಆರೋಪಿಯ ವಾದವನ್ನು ಪ್ರತ್ಯೇಕವಾಗಿ ದಾಖಲಿಸಲಾಯಿತು.ತರುವಾಯ ಪ್ರಾಸಿಕ್ಯೂಶನ್ ಆರೋಪಿ ವಿರುದ್ಧದ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ಒಟ್ಟಾರೆ ಪಿ.ಡಬ್ಲ್ಯು .1 ರಿಂದ ಪಿ.ಡಬ್ಲ್ಯು .10 ರ ವರೆಗಿನ ಸಾಕ್ಷಿಗಳನ್ನು ವಿಚಾರಣೆ ಮಾಡಿತು ಮತ್ತು ನಿಶಾನೆ ಪಿ .1 ರಿಂದ ನಿಶಾನೆ ಪಿ .8 ರ ವರೆಗೆ ಗುರುತು ಮಾಡಲಾಯಿತು.ಸಿದ್ದಣ್ಣ ದೇಸಾಯಿಯ ವ್ಯತಿರಿಕ್ತ ಹೇಳಿಕೆಯಾದ ನಿಶಾನೆ ಡಿ .1 ನ್ನು ಸಹ ಗುರುತು ಮಾಡಲಾಯಿತು.ನಕಲಿ ಚಿನ್ನವನ್ನು ಎಂ.ಒ .1 ಎಂದು ಗುರುತು ಮಾಡಲಾಯಿತು.

5. ಸಾಕ್ಷ್ಯದ ಮುಕ್ತಾಯದ ನಂತರ, ಆರೋಪಿಗಳ ಹೇಳಿಕೆಯನ್ನು ಪರಿಶೀಲಿಸಲಾಯಿತು.ಅದರಲ್ಲಿ, ಆರೋಪಿಯು ಪ್ರಾಸಿಕ್ಯೂಶನ್ನ ದೋಷಾರೋಪಣೆಯ ಪುರಾವೆಗಳನ್ನು ನಿರಾಕರಿಸಿದ್ದನಾದರೂ, ' ಸಿಆರ್ಪಿಸಿ ' ಯ 233 ನೇ ಪ್ರಕರಣದ ಅಡಿಯಲ್ಲಿ ಆಲೋಚಿಸಲಾದಂತೆ, ಯಾವುದೇ ಪ್ರತಿವಾದ ಸಾಕ್ಷ್ಯವನ್ನು ಮಂಡಿಸಲು ಅವನು ಮುಂದೆ ಬರಲಿಲ್ಲ.

6. ತರುವಾಯ, ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿ ವಕೀಲರು ಮಂಡಿಸಿದ ವಾದಗಳನ್ನು ಆಲಿಸಿ, ಪಿ.ಡಬ್ಲ್ಯು .2, 3, 5, 7, 9 ಮತ್ತು 10 ರ ಸಾಕ್ಷ್ಯಗಳನ್ನು ಮತ್ತು ಸಿ.ಸಿ.ಸಂಖ್ಯೆ:30/2008 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಗುರುತು ಮಾಡಿದ ನಿಶಾನೆ ಪಿ .1 ರಿಂದ ಪಿ .8 ರ ವರೆಗಿನ ದಾಖಲೆಗಳನ್ನು ಸಹ ಅವಗಾಹನೆ ಮಾಡಲಾಯಿತು ಮತ್ತು ಸಿ.ಸಿ.ಸಂಖ್ಯೆ:30/2008 ರಲ್ಲಿ 1 ನೇ ಆರೋಪಿಯ ವಿರುದ್ಧ ಶಿಕ್ಷೆಯ ತೀರ್ಪನ್ನು ನೀಡಿ, 2 ನೇ ಆರೋಪಿಯಾದ ಪರಮೇಶಿಗೆ ಸಂಬಂಧಿಸಿದಂತೆ, ಸಿ.ಸಿ.ಸಂಖ್ಯೆ:445/2008 ರಲ್ಲಿ ಸಹ ಗುರುತು

ಮಾಡಲಾಗಿದೆ.ಆದರೆ,ದಿನಾಂಕ: 20.07.2019 ರ ತನ್ನ ಆದೇಶದಲ್ಲಿ ಸಾಮಾನ್ಯ ತೀರ್ಪನ್ನು ನೀಡುವ ಮೂಲಕ ಸಿ.ಸಿ.ಸಂಖ್ಯೆ:445/2008 ರಲ್ಲಿ 2 ನೇ ಆರೋಪಿಗೆ ಸಂಬಂಧಿಸಿದಂತೆ ಕೇಸನ್ನು ಖುಲಾಸೆಗೊಳಿಸಿತು.

7. 1 ನೇ ಆರೋಪಿಯು ಸಿ.ಸಿ.ಸಂಖ್ಯೆ: 30/2008 ರಲ್ಲಿ ತನ್ನ ವಿರುದ್ಧ ನೀಡಲಾದ ಅಪರಾಧ ನಿರ್ಣಯದ ತೀರ್ಪನ್ನು ಹಾಗೂ ಶಿಕ್ಷೆಯ ಆದೇಶವನ್ನು ಪ್ರಶ್ನಿಸುವ ಮೂಲಕ ಕ್ರಿ.ಸಂಖ್ಯೆ:103/2009 ರಲ್ಲಿ ಮೊದಲನೇ ಅಪೀಲು ನ್ಯಾಯಾಲಯದ ಮುಂದೆ ಅಪೀಲು ಹೂಡಿದ್ದಾನೆ.ಆದರೆ, ಅಧಿವಿಚಾರಣಾ ನ್ಯಾಯಾಲಯವು ಸಿ.ಸಿ.ಸಂಖ್ಯೆ:445/2008 ಸೇರಿದಂತೆ, ಒಂದೇ ಸಾಮಾನ್ಯ ತೀರ್ಪನ್ನು ನೀಡಿದೆ.ಆದರೆ, ಗಮನಿಸಲಾದಂತೆ ಸಿ.ಸಿ.ಸಂಖ್ಯೆ:445/08 ರಲ್ಲಿನ ಆರೋಪಿಯನ್ನು ಎಂದರೆ, ಪರಮೇಶಿಯನ್ನು ಕ್ರಿ.ಅ.ಸಂಖ್ಯೆ:103/2009 ರಲ್ಲಿ ತಪ್ಪಾಗಿ, ಖುಲಾಸೆಗೊಳಿಸಿದೆ.ರಾಜ್ಯದ ಪರವಾಗಿ ಎಚ್ಚಿಪಿ ರವರ ಮೂಲಕ ಮತ್ತು ಸಿ.ಸಿ.ಸಂಖ್ಯೆ:30/2008 ರಲ್ಲಿ 1 ನೇ ಆರೋಪಿಯನ್ನು ಪ್ರತಿನಿಧಿಸಿರುವ ಇದರಲ್ಲಿನ ಅರ್ಜಿದಾರರ ಪರ ಮಾನ್ಯ ವಕೀಲರ ಮೂಲಕ ಇದನ್ನು ಸ್ಪಷ್ಟಪಡಿಸಬೇಕಾಗಿದೆ.

8. ಇದರಲ್ಲಿನ ಅರ್ಜಿದಾರರ ಪರ ಮಾನ್ಯ ವಕೀಲರು ನಿಶಾನೆ ಪಿ .2 ರಲ್ಲಿ ದೂರನ್ನು ಬರೆದುಕೊಟ್ಟ ಪಿ.ಡಬ್ಲ್ಯೂ .2 ರ ಸಾಕ್ಷ್ಯದ ಮೂಲಕ ನನ್ನ ಗಮನಕ್ಕೆ ತಂದಿರುತ್ತಾರೆ.ಅರ್ಜಿದಾರನು ತನ್ನ ಸಾಕ್ಷ್ಯದಲ್ಲಿ ತಾನು ಅಡಿಪಾಯವನ್ನು ಅಗೆಯುತ್ತಿದ್ದಾಗ ಅಲ್ಲಿ ಕಪ್ಪು ನಿಧಿ ಕಂಡುಬಂತು.ಆದುದರಿಂದ, ಅವನು ಕಪ್ಪು ನಿಧಿಯ ಬಗ್ಗೆ ದೂರುದಾರನಿಗೆ ಮಾಹಿತಿಯನ್ನು ನೀಡಿದನು ಮತ್ತು ಬಳ್ಳಾರಿ ಜಿಲ್ಲೆಯ ಹಡಗಲಿ ಬಸ್ ನಿಲ್ದಾಣಕ್ಕೆ ಬಂದು, ಅವನಿಂದ ಚಿನ್ನವನ್ನು ಖರೀದಿಸಲು ಕೇಳಿದನು. ಅದರಂತೆ, ದೂರುದಾರನು ಚಿನ್ನವನ್ನು ಖರೀದಿಸಲು ತನ್ನ ಸ್ನೇಹಿತ ಮಲ್ಲಿನಾಥನೊಂದಿಗೆ ಹಡಗಲಿ ಬಸ್ನಿಲ್ದಾಣಕ್ಕೆ ಬಂದನು.ದೂರುದಾರನು ಚಿನ್ನದ ಎರಡು ತುಂಡುಗಳನ್ನು ಪರಿಶೀಲಿಸಲು ಜೇವರ್ಗಿಯಲ್ಲಿರುವ ಆಭರಣ ಮಳಿಗೆಗೆ ಹೋದನು.ಆ ನಂತರ ಅವು ನಕಲಿ ಚಿನ್ನದ ವಸ್ತುಗಳೆಂದು ಅವನಿಗೆ ತಿಳಿಯಿತು.ಆದ್ದರಿಂದ, ಪಿ.ಡಬ್ಲ್ಯೂ .2,ದಿನಾಂಕ: 15.6.2007 ರಂದು ಎದುರುದಾರ-ಪೊಲೀಸರ ಬಳಿ ಹೋಗಿ ಅವನು ನಿಶಾನೆ ಪಿ .2 ರ ಪ್ರಕಾರ ದೂರು ದಾಖಲಿಸಿದನು.ಆದರೆ, ಅವನು ತನ್ನ ದೂರಿನಲ್ಲಿ, ಆರೋಪಿಯು ಮಾರಾಟ ಮಾಡಿದ್ದು ಅಸಲಿ ಚಿನ್ನವೋ?ಅಥವಾ ನಕಲಿ ಚಿನ್ನವೋ?ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ ಎಂದು ತನ್ನ ಸಾಕ್ಷ್ಯದಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾನೆ.ಪಿ.ಡಬ್ಲ್ಯೂ .2 ನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಅವನು ನಿಶಾನೆ ಪಿ .2 ರಲ್ಲಿನ ದೂರಿನಲ್ಲಿ ಮಾಡಿದ ದೃಢಕ್ತಿಗಳನ್ನು ಸಮರ್ಥಿಸಿಕೊಂಡಿಲ್ಲ ಮತ್ತು ಅವನ ದೂರಿನ ಆಧಾರದ ಮೇಲೆ, ನಿಶಾನೆ ಪಿ .7 ರ ಪ್ರಕಾರ ಎಫ್ಐಆರ್ ದಾಖಲಾಯಿತು.ಎಫ್ಐಆರ್ ದಾಖಲಾದ ನಂತರ, ಪಿ.ಡಬ್ಲ್ಯೂ .10, ಸುನಿಲ್ ವೈ ನಾಯ್ಕ ಇವರು ಮೊಕದ್ದಮೆಯನ್ನು ತನಿಖೆಗಾಗಿ ಕೈಗೆತ್ತಿಕೊಂಡಿರುತ್ತಾರೆ ಮತ್ತು ಆರೋಪಿಗಳ ವಿರುದ್ಧ ಚಾರ್ಜ್ಶೀಟ್ ಹಾಕಲಾಯಿತು.

9. ಪಿ.ಡಬ್ಲ್ಯೂ .1, ಫೋಟೋಗ್ರಾಫರ್ ಎಂದು ಹೇಳಲಾಗಿದ್ದು, ಛಾಯಾಚಿತ್ರವನ್ನು ಹಾಜರುಪಡಿಸಿಲ್ಲ ಮತ್ತು ತನಿಖೆಯ ಸಮಯದಲ್ಲಿ ತನಿಖಾಧಿಕಾರಿಯು ಅದನ್ನು ಪಡೆದುಕೊಂಡಿಲ್ಲ.ಪಿ.ಡಬ್ಲ್ಯೂ .4 ಮೌಲ್ಯಮಾಪಕನೆಂದು ಹೇಳಲಾಗಿದೆ.ಆದರೆ, ಅವನು ಪ್ರತಿಕೂಲ ಸಾಕ್ಷಿಯಾಗಿ ಪರಿಣಮಿಸಿದ್ದು, ತನ್ನ ಹೇಳಿಕೆಯ ಆವೃತ್ತಿಗೆ ಬದ್ಧನಾಗಿರಲಿಲ್ಲ.ಪಿ.ಡಬ್ಲ್ಯೂ., ಪಿ.ಡಬ್ಲ್ಯೂ.10 ನಡೆಸಿದ ನಿಶಾನೆಗಳ ಪಂಚರ ಸಾಕ್ಷಿದಾರನೆಂದು ಹೇಳಲಾಗಿದೆ.ಈ ಸಾಕ್ಷಿದಾರರು ತಮ್ಮ ಹೇಳಿಕೆಗಳ ಆವೃತ್ತಿಗಳನ್ನು ವಿರೋಧಿಸಲಿಲ್ಲ.ಅದನ್ನು ಸಿ.ಸಿ.ಸಂಖ್ಯೆ:30/2008 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸರಿಯಾಗಿ ವಿವೇಚಿಸಿಲ್ಲ.ಆದರೆ, ಸಾಕ್ಷ್ಯಗಳ

ಗುಣಾರ್ಹತೆಗಳನ್ನು ವಿವೇಚನೆ ಮಾಡುವ ಸಂದರ್ಭದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ನಿಶಾನೆ ಪಿ .2 ರ ಪ್ರಕಾರ ದೂರು ಸಲ್ಲಿಸಿದ ದೂರುದಾರನ ಬಾಯಿಂದ ಬಂದಿದ್ದರೂ ಮತ್ತು ಸಹ-ಸಾಕ್ಷಿದಾರನಾಗಿರುವ ಪಿ.ಡಬ್ಲ್ಯು.ಎಂದರೆ, ಮಲ್ಲಿನಾಥನ ಸಮ್ಮುಖದಲ್ಲಿ ಪಿ.ಡಬ್ಲ್ಯು .10 ರವರು ಮಂಜುನಾಥ್ ಹಾಗೂ ಎಎಸ್ಐರವರ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆಯನ್ನು ಮಾಡಿದ್ದಾರೆ ಎಂದು ಪ್ರಶ್ನಿತ ತೀರ್ಪಿನಲ್ಲಿ ನಿರ್ದಿಷ್ಟವಾಗಿ ಹೇಳಿದೆ.ಪಿ.ಡಬ್ಲ್ಯು .10 ತನಿಖಾಧಿಕಾರಿಯಾಗಿದ್ದು, ತಮ್ಮ ಸಾಕ್ಷ್ಯವನ್ನು ಹೇಳಿದ್ದಾರೆ.ಆದರೆ, ಅಧಿವಿಚಾರಣಾ ನ್ಯಾಯಾಲಯವು ಪಿ.ಡಬ್ಲ್ಯು .2, 3, 5 9, 7 9, 9 ಮತ್ತು 10 ಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಮತ್ತು ಪಿ.ಡಬ್ಲ್ಯು .1, 4, 6 ಮತ್ತು 8 ರ ಸಾಕ್ಷ್ಯಗಳಿಗೆ ವಿರುದ್ಧವಾಗಿರುವ ಅವರ ಸಾಕ್ಷ್ಯಗಳ ಗುಣಾರ್ಹತೆಯನ್ನು ವಿವೇಚಿಸಿಲ್ಲ.ಈ ಸಾಕ್ಷಿಗಳು ಪ್ರಾಸಿಕ್ಯೂಷನ್ ವಾದವನ್ನು ವಿರೋಧಿಸಲಿಲ್ಲ ಮತ್ತು ಪ್ರಾಸಿಕ್ಯೂಷನ್ ಮಂಡಿಸಿದ ಸಿದ್ಧಾಂತವು ಅಸ್ಪಷ್ಟ ಎಂದು ಅದು ಸ್ವತಃ ಸೂಚಿಸುತ್ತದೆ.ಆದರೆ ಅಧಿವಿಚಾರಣಾ ನ್ಯಾಯಾಲಯವು ಸಿ.ಸಿ.ಸಂಖ್ಯೆ:30/2008 ರಲ್ಲಿ 1 ನೇ ಆರೋಪಿಯ ವಿರುದ್ಧ ಶಿಕ್ಷೆಯ ತೀರ್ಪು ನೀಡಿದೆ.ಮೋಸ ಮಾಡಿರುವ ಸ ಂ ಗತಿಗೆ ಸಂಬಂಧಿಸಿದಮಟ್ಟಿಗೆ ಆರೋಪಿಯ ವಿರುದ್ಧ ವಾದವನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದರೆ, ಅದರ ಪರಿಣಾಮವಾಗಿ ಆರೋಪಿಯನ್ನು ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧ ನಿರ್ಣಯಕ್ಕಾಗಿ ಮೌಲ್ಯಮಾಪನ ಮಾಡಲಾಗಿದೆ.ಆದರೆ ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧ ಎಸಗುವ ಸಲುವಾಗಿ ನಂಬಲರ್ಹವಾದ ಮತ್ತು ಪೂರಕ ಸಾಕ್ಷ್ಯವನ್ನು ಪ್ರಾಸಿಕ್ಯೂಷನ್ ಮಂಡಿಸಿಲ್ಲ.ಆದರೆ, ಭಾರತ ದಂಡ ಸಂಹಿತೆಯ 420 ನೇ ಪ್ರಕರಣವು ಅದೇ ಸಂಹಿತೆಯ 415 ನೇ ಪ್ರಕರಣವನ್ನು ಹೋಲುತ್ತದೆ.ವಂಚನೆಗೆ ಸಂಬಂಧಿಸಿದಂತೆ, ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಿಸಲಾದಂತೆ ಭಾರತ ದಂಡ ಸಂಹಿತೆಯ 415 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದ ಅಂಶಗಳನ್ನು 1 ನೇ ಆರೋಪಿಯು, ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಮಾಡಿರುವನೆಂದು ಹೇಳಲಾದ ಬಗ್ಗೆ ಸ್ವೀಕಾರಾರ್ಹ, ಪೂರಕ ಮತ್ತು ಅಂಗೀಕಾರಾರ್ಹ ಸಾಕ್ಷ್ಯ ಎ ಪುರಾವೆಗಳನ್ನು ಮುಂದಿಡುವ ಮೂಲಕ ಪ್ರಾಸಿಕ್ಯೂಷನ್ ಸಾಬೀತುಪಡಿಸಿಲ್ಲ.ಆದರೆ, ಅಧಿವಿಚಾರಣಾ ನ್ಯಾಯಾಲಯವು, 2 ನೇ ಆರೋಪಿಗೆ ಸಂಬಂಧಿಸಿದಂತೆ ಖುಲಾಸೆಗೊಳಿಸಿತು.ಸಹ-ಆರೋಪಿಗೆ ಸಂದೇಹದ ಲಾಭವನ್ನು ವಿಸ್ತರಿಸಿದಾಗ, 1 ನೇ ಆರೋಪಿಗೂ ಸಹ ಅದನ್ನು ವಿಸ್ತರಿಸತಕ್ಕದ್ದು. ಆದ್ದರಿಂದ, ಈ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿದೆ.ಇಲ್ಲದಿದ್ದರೆ, 1 ನೇ ಆರೋಪಿಗೆ ಸಂಬಂಧಿಸಿದಂತೆ ನ್ಯಾಯ ವೈಫಲ್ಯವಾಗುತ್ತದೆ.

10. ಅಷ್ಟೇ ಅಲ್ಲದೆ, ನಿಶಾನೆ ಪಿ .8 ರ ಪ್ರಕಾರ, 1 ನೇ ಆರೋಪಿಯ ಸ್ವಯಂಪ್ರೇರಿತ ಹೇಳಿಕೆಯ ಮಟ್ಟಿಗೆ, ತನಿಖಾಧಿಕಾರಿಯ ವಶದಲ್ಲಿದ್ದಾಗ ಅವನ ಮುಂದೆ ನೀಡಿದ ಹೇಳಿಕೆಯಲ್ಲಿ, ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯ ಮುಂದೆ ಅದನ್ನು ತಪ್ಪೊಪ್ಪಿಕೊಂಡಿದ್ದಾನೆ.ಅದನ್ನು ಸರಿಯಾದ ದೃಷ್ಟಿಕೋನದಿಂದ ನಿರ್ಣಯಿಸಬೇಕು ಎಂದು ವಾದಿಸಲಾಗಿದೆ.ಸದ್ಯದ ಮೊಕದ್ದಮೆಯಲ್ಲಿ, ಅವನು ನಿಶಾನೆ ಪಿ .8 ರ ಪ್ರಕಾರ 1 ನೆಯ ಆರೋಪಿಯು ಸ್ವಯಂಪ್ರೇರಿತ ಹೇಳಿಕೆಯನ್ನು ನೀಡಿದ್ದರಿಂದ ಅವನು 1,20,000/- ರೂ.ಗಳ ಮೊತ್ತಕ್ಕೆ 1 ಕೆ.ಜಿ. ತೂಕದ ನಕಲು ಚಿನ್ನವನ್ನು ಹಸ್ತಾಂತರಿಸಿದ ಬಗ್ಗೆ ತನ್ನೊಪ್ಪಿಕೊಂಡಿದ್ದಾನೆಂದು ಹೇಳಲಾಗಿದೆ ಮತ್ತು ಪಿಡಬ್ಲ್ಯು 10 ಚಾರ್ಜ್ಶೀಟ್ ಹಾಕಿದ ತನಿಖಾಧಿಕಾರಿಯೆಂದು ಹೇಳಲಾಗಿದೆ.ವಿರೋಧಾಭಾಸ ಹೇಳಿಕೆ ನೀಡಿರುವುದರಿಂದ ಈ ಆರೋಪಿಯು ಆಪಾದಿಸಲಾದ ಅಪರಾಧವನ್ನು ಎಸಗಿದ್ದಾನೆಂದು ಹೇಳಲಾಗುವುದಿಲ್ಲ.ಈ ಅಂಶವನ್ನು ಅಧಿ ವಿಚಾರಣಾ ನ್ಯಾಯಾಲಯವಾಗಲೀ ಅಥವಾ ಮೊದಲನೇ ಅಪೀಲು

ನ್ಯಾಯಾಲಯವಾಗಲೀ ಸರಿಯಾಗಿ ವಿವೇಚಿಸಿಲ್ಲ.1 ನೇ ಆರೋಪಿಯು ಮಾಡಿದ ಮತ್ತು ಮಂಡಿಸಿದ ಹಾಗೂ ಪಿಡಬ್ಲ್ಯು .10 ದಾಖಲಿಸಿದ ತಪ್ಪೊಪ್ಪಿಗೆಗೆ ಆರೋಪಿಯ ಕೇಸನ್ನು ಸಾಬೀತುಪಡಿಸಲು ಯಾವುದೇ ವಿಶ್ವಾಸಾರ್ಹತೆಯನ್ನು ನೀಡಲಾಗುವುದಿಲ್ಲ.ಇವೆಲ್ಲವೂ, ನ್ಯಾಯಾಲಯವು ನೀಡಿದ ಪ್ರಶ್ನಿತ ತೀರ್ಪಿನ ಮಧ್ಯಸ್ಥಿಕೆಗೆ ಕೋರಿ, ಅರ್ಜಿದಾರರ ಪರ ಮಾನ್ಯ ವಕೀಲರು ತೆಗೆದುಕೊಂಡ ವಾದವಿವಾದಗಳಾಗಿವೆ.

11. ಅಧಿವಿಚಾರಣಾ ನ್ಯಾಯಾಲಯ ಮತ್ತು ಒಂದನೇ ಅಪೀಲು ನ್ಯಾಯಾಲಯವು ಸಾಕ್ಷ್ಯಗಳ ಗುಣಾರ್ಹತೆಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ವಿವೇಚಿಸಿರಬೇಕಿತ್ತು.ಆದರೆ, ಸಿ.ಆರ್.ಪಿ.ಸಿಯ 386 ನೇ ಪ್ರಕರಣವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿಲ್ಲ.ಚಿನ್ನದ ಗುಣಮಟ್ಟಕ್ಕೆ ಸಂಬಂಧಿಸಿದಂತೆ, 2 ನೇ ಆರೋಪಿಯ ಉಪಸ್ಥಿತಿಯಲ್ಲಿ, 1 ನೇ ಆರೋಪಿಯ ಸ್ವಾಧೀನದಿಂದ ದೂರುದಾರನು ಖರೀದಿಸಿದನೆಂದು ಹೇಳಲಾದ ಚಿನ್ನದ ಗುಣಮಟ್ಟಕ್ಕೆ ಸಂಬಂಧಿಸಿದಂತೆ, ಚಿನ್ನದ ಗುಣಮಟ್ಟವನ್ನು ನಿಜವಾದ ಚಿನ್ನವೆಂದು ದೃಢೀಕರಿಸಿ, ಮೌಲ್ಯಮಾಪನ ಮಾಡಲು ಸಕ್ಷಮ ವ್ಯಕ್ತಿಯಾಗಿದ್ದ ಪ್ರಾಸಿಕ್ಯೂಶನ್ ಮೌಲ್ಯಮಾಪನ ಪ್ರಮಾಣಪತ್ರವನ್ನು ಹಾಜರುಪಡಿಸಿಲ್ಲ.ಇದರಿಂದ ಪ್ರಾಸಿಕ್ಯೂಷನ್ ಮಂಡಿಸಿದ ವಾದವು ಅನುಮಾನಾಸ್ಪದವಾದದ್ದೆಂದು ಕಂಡುಬರುತ್ತದೆ.ಆದ್ದರಿಂದ, ಈ ಅರ್ಜಿಯಲ್ಲಿ, ಪ್ರಾಸಿಕ್ಯೂಷನ್ ಸಾಕ್ಷ್ಯಗಳ ಮತ್ತು ದಾಖಲೆಗಳ ಗುಣಾರ್ಹತೆಗಳನ್ನು ಮರುವಿವೇಚಿಸಲು ಮಧ್ಯಪ್ರವೇಶಿಸುವುದನ್ನು ಅಗತ್ಯಪಡಿಸುತ್ತದೆ.ಈ ವಾದವನ್ನು ಅರ್ಜಿದಾರರ ಪರ ಮಾನ್ಯ ವಕೀಲರು ಮಂಡಿಸುತ್ತಾ, ಮೊದಲನೇ ಅಪೀಲು ನ್ಯಾಯಾಲಯವು ಸ್ಥಿರೀಕರಿಸಿರುವ ಸಿ.ಸಿ.ಸಂಖ್ಯೆ:30/2008 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಪ್ರಶ್ನೆತ ತೀರ್ಪಿನ ಮಧ್ಯಸ್ಥಿಕೆಯನ್ನು ಕೋರಿದ್ದಾರೆ ಹಾಗೂ ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಆರೋಪಿಯನ್ನು ಖುಲಾಸೆಗೊಳಿಸಲು ಕೋರಿದ್ದಾರೆ.

12. ನಿಶಾನೆ ಪಿ .2 ರಲ್ಲಿನ ದೂರಿನಲ್ಲಿ ಮಾಡಿದ ದೃಢಕ್ತಿಗಳು ಪ್ರತ್ಯಕ್ಷ ಸಾಕ್ಷಿ ಮತ್ತು ದೂರುದಾರನ ಸ್ನೇಹಿತರಾದ ಮತ್ತು ಪಿ.ಡಬ್ಲ್ಯು .2 ಹಾಗೂ 3 ರ ಸಾಕ್ಷ್ಯಗಳನ್ನು ಸಹ ಗೌರವಾನ್ವಿತ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ನನ್ನ ಗಮನಕ್ಕೆ ತಂದಿರುತ್ತಾರೆ.ಅವರ ಸಮ್ಮುಖದಲ್ಲಿ 1,20,000/- ರೂ.ಗಳನ್ನು ಪಾವತಿಸಿ ಕೇವಲ ಎಂ.ಒ ..ಚಿನ್ನದ ವಸ್ತುವನ್ನು ಖರೀದಿಸಲಾಯಿತು.ಅದನ್ನು ಪ್ರಾಸಿಕ್ಯೂಷನ್ ಸಾಬೀತು ಮಾಡಬೇಕಾಗಿದೆ.ಪಿ.ಡಬ್ಲ್ಯು .2, 3, 5, 7, 9 ಮತ್ತು 10 ರ ಸಾಕ್ಷ್ಯಗಳನ್ನು ದೃಢೀಕರಿಸಿರುವುದಲ್ಲದೆ, ಸಮಂಜಸವಾಗಿರುವುದು ಕಂಡುಬಂದಿವೆ.ಈ ಸಾಕ್ಷಿಗಳನ್ನು ಪ್ರಾಸಿಕ್ಯೂಷನ್ ಕಡೆಯಿಂದ ವಿಚಾರಣೆಗೆ ಒಳಪಡಿಸಲಾಗಿದೆಯಲ್ಲದೆ, ಸಂಪೂರ್ಣ ಪಾಟೀಸವಾಲಿಗೂ ಸಹ ಒಳಪಡಿಸಲಾಗಿದೆ.ಆದರೆ, ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್ ಮಂಡಿಸಿರುವ ವಾದವನ್ನು ನಂಬದಿರಲು ಪ್ರತಿವಾದದ ಕಡೆಯಿಂದ ಏನನ್ನೂ ಹೊರತೆಗೆಯಲಾಗಿಲ್ಲ.ಸಹ ಆರೋಪಿಸಂಖ್ಯೆ: 2 ಎಂದರೆ, ಪರಮೇಶಿಯನ್ನು ಸಿ.ಸಿ.ಸಂಖ್ಯೆ:445/2008 ರಲ್ಲಿನ ಸದರಿ ಅಪರಾಧಕ್ಕಾಗಿ ಖುಲಾಸೆಗೊಳಿಸಲಾಗಿದೆಯೆಂದು ಹೇಳಲಾಗುವ ಕಾರಣಕ್ಕೆ ಈ ಪ್ರಕರಣದಲ್ಲೂ ಸಹ 1 ನೇ ಆರೋಪಿಗೆ ಅದನ್ನು ವಿಸ್ತರಿಸಲಾಗುವುದಿಲ್ಲ. ಪ್ರಾಸಿಕ್ಯೂಷನ್ ಮಂಡಿಸಿದ ಸಾಕ್ಷ್ಯವನ್ನು ಅಧಿವಿಚಾರಣಾ ನ್ಯಾಯಾಲಯವು, ಸಮಗ್ರವಾಗಿ ವಿವೇಚಿಸಿದೆ ಮತ್ತು 1 ನೇ ಆರೋಪಿಯು ಸ್ವಯಂಪ್ರೇರಿತ ಹೇಳಿಕೆಯನ್ನು ನೀಡಿದ್ದಾನೆ ಎನ್ನುವಷ್ಟರಮಟ್ಟಿಗೆ, ಅವನ ತಪ್ಪನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ ಮತ್ತು ಸ್ವಯಂಪ್ರೇರಿತ ಹೇಳಿಕೆಯ ಆಧಾರದ ಮೇಲೆ, ತನಿಖಾಧಿಕಾರಿಯು ನಿಶಾನೆ ಪಿ .4 ರ ಪ್ರಕಾರ ಮಹಜರು ನಡೆಸಿದರು ಎಂದು ಸರಿಯಾಗಿಯೇ ತೀರ್ಮಾನಕ್ಕೆ ಬಂದಿದೆ.ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಈ ಸಾಕ್ಷಿದಾರರ ಸಾಕ್ಷ್ಯಗಳನ್ನು ಪರಿಗಣಿಸಿ, ಆರೋಪಿಯು ಭಾರತ ದಂಡ

ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾನೆ ಎಂದು ಸರಿಯಾದ ತೀರ್ಮಾನಕ್ಕೆ ಬಂದಿದೆ.1 ನೇ ಆರೋಪಿಯ ವಿರುದ್ಧ ಅಪರಾಧನಿರ್ಣಯ ಮಾಡಿದ ನಂತರ, ಕ್ರಿಮಿನಲ್ ಅಪೀಲುಸಂಖ್ಯೆ: 103/2009 ರಲ್ಲಿ ಅವನು ಅಪೀಲು ಸಲ್ಲಿಸಿದ್ದಾನೆ.ಒಂದನೇ ಅಪೀಲು ನ್ಯಾಯಾಲಯವು ನೀಡಿದ ತೀರ್ಪ ಸಿ.ಸಿ.ಸಂಖ್ಯೆ:30/2008 ರಲ್ಲಿನ ಮೊಕದ್ದಮೆಗೆ ಸಂಬಂಧಿಸಿದೆ.ಅದರಲ್ಲಿ, 1 ನೇ ಆರೋಪಿ ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣಯಿಸಿರುವುದು ದೃಢಪಟ್ಟಿದೆ.ಪಿ.ಡಬ್ಲ್ಯು .2, ಶಿವರಾಜ್ ಅವರು ನಿಶಾನೆ ಪಿ .2 ರ ದೂರನ್ನು ಬರೆದವರಾಗಿದ್ದು, ಅವರನ್ನು ಸಂಪೂರ್ಣವಾಗಿ ಪಾಟೀಸವಾಲಿಗೆ ಒಳಪಡಿಸಲಾಗಿದೆ.ಪಾಟೀ ಸವಾಲಿನಲ್ಲಿ ಪ್ರಾಸಿಕ್ಯೂಷನ್ ವಾದವನ್ನು ನಂಬದಿರಲು ಯಾವುದೇ ಸಾಕ್ಷ್ಯವನ್ನು ಹೊರತೆಗೆಯಲಾಗಿಲ್ಲ.ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಗಳ ಗುಣಾರ್ಹತೆಗಳನ್ನು ವಿವೇಚಿಸಿ ಅಪರಾಧ ನಿರ್ಣಯವನ್ನು ಮಾಡುವ ಮೂಲಕ ಸರಿಯಾದ ತೀರ್ಮಾನಕ್ಕೆ ಬಂದಿದೆ.ಆದ್ದರಿಂದ, ಈ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯಲ್ಲಿ ಅಧಿವಿಚಾರಣಾ ನ್ಯಾಯಾಲಯ ಮತ್ತು ಅಪೀಲು ನ್ಯಾಯಾಲಯವು ನೀಡಿದ ತೀರ್ಪಿನ ಹಸ್ತಕ್ಷೇಪಕ್ಕೆ ಕೋರಿರುವುದಿಲ್ಲ.ಇವೆಲ್ಲವೂ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ಮಾಡಿದ ವಾದಗಳಾಗಿದ್ದು ಮತ್ತು ಈ ಕ್ರಿಮಿನಲ್ ಅರ್ಜಿಯು ಗುಣಾರ್ಹತೆ ರಹಿತವೆಂದು ಪರಿಗಣಿಸಿ ವಜಾಗೊಳಿಸಲು ಕೋರಲಾಗಿರುತ್ತದೆ ಮತ್ತು ಸಿ.ಸಿ.ಸಂಖ್ಯೆ:30/2008 ರಲ್ಲಿ ಆರೋಪಿಗಳ ವಿರುದ್ಧ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಅಪರಾಧ ನಿರ್ಣಯದ ತೀರ್ಪನ್ನು ಸ್ಥಿರೀಕರಿಸಿದ್ದು, ಅದನ್ನು ಅಪೀಲು ನ್ಯಾಯಾಲಯವು ದೃಢೀಕರಿಸಿದೆ.

13. ಈ ಸನ್ನಿವೇಶದಲ್ಲಿ, ತನಿಖೆಯ ಸಮಯದಲ್ಲಿ ತನಿಖಾಧಿಕಾರಿಯಿಂದ ಬಂಧಿತನಾದ ಛಾಯಾಗ್ರಾಹಕ ಎಂದು ಹೇಳಲಾದ ಪಿ.ಡಬ್ಲ್ಯು .1 ರ ಸಾಕ್ಷ್ಯವನ್ನು ಉಲ್ಲೇಖಿಸುವುದು ಪ್ರಸ್ತುತವಾಗಿದೆ.ಆದರೆ, ಪ್ರಾಸಿಕ್ಯೂಷನ್ ಯಾವುದೇ ಛಾಯಾಚಿತ್ರಗಳನ್ನು ಹಾಜರುಪಡಿಸಿಲ್ಲ ಮತ್ತು ಅವುಗಳನ್ನು ಹಾಜರುಪಡಿಸಲು ಯಾವುದೇ ಪ್ರಯತ್ನವನ್ನು ಸಹ ಮಾಡಿಲ್ಲ.

14. ಪಿ.ಡಬ್ಲ್ಯು .2 ಶಿವರಾಜ್ ನಿಶಾನೆ ಪಿ .2 ರಲ್ಲಿ ದೂರು ಬರೆದವರೆಂದು ಹೇಳಲಾಗಿದೆ.ಆದರೆ, ಅವರ ಸಾಕ್ಷ್ಯವು ಅವರ ದೂರಿನಲ್ಲಿ ಮಾಡಿದ ಆರೋಪಗಳಿಗೆ ಅನುಗುಣವಾಗಿಲ್ಲ.ಪಿ.ಡಬ್ಲ್ಯು .1 9, 4, 6, 8 ರ ಸಾಕ್ಷ್ಯಗಳನ್ನು ಉಲ್ಲೇಖಿಸುವುದು ಸೂಕ್ತವಾಗಿದೆ.ಈ ಸಾಕ್ಷಿದಾರರು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದಾರೆ.ಆದರೆ, ಇದರಲ್ಲಿ ಪಿ.ಡಬ್ಲ್ಯು .6 ರ ಸಮ್ಮುಖದಲ್ಲಿ ಪಿ.ಡಬ್ಲ್ಯು .10 ನಡೆಸಿದ್ದಾರೆಂದು ಹೇಳಲಾಗಿರುವ ನಿಶಾನೆ ಪಿ .4 ಮಹಜರೂ ಸೇರಿದಂತೆ ಅವರು ತಮ್ಮ ಹೇಳಿಕೆಗಳಿಗೆ ಬದ್ಧರಾಗಿಲ್ಲ.ಪಿ.ಡಬ್ಲ್ಯು .8 ರ ಇವರು ತನಿಖೆಯ ಅವಧಿಯಲ್ಲಿ ಪಂಚರಾಗಿದ್ದು, ಅವರ ಎದುರಿನಲ್ಲಿ ನಿಶಾನೆ.ಪಿ .3 ರ ಪ್ರಕಾರ ಮಹಜರು ನಡೆಸಿದ್ದಾರೆ.ಆದಾಗ್ಯೂ, ಪಿ.ಡಬ್ಲ್ಯು, 1, 4, 6 ಮತ್ತು 8 ರ ಸಾಕ್ಷ್ಯಾಧಾರಗಳನ್ನು ಸ್ಥೂಲವಾಗಿ ಗಮನಿಸಿದಾಗ, ನಿಶಾನೆ ಪಿ .2 ಕ್ಕೆ ಸಂಬಂಧಿಸಿದಂತೆ, ಪಿ.ಡಬ್ಲ್ಯು .2 ರ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿದೆ ಮತ್ತು ಅದೇ ರೀತಿ ಪಿ.ಡಬ್ಲ್ಯು .3 ರ ಸಾಕ್ಷ್ಯವು ಪ್ರತ್ಯಕ್ಷ ಸಾಕ್ಷಿಯೆಂದು ಹೇಳಲಾಗಿದೆ ಮತ್ತು ಪಿ.ಡಬ್ಲ್ಯು.ಚಿನ್ನದ ವಸ್ತುಗಳಾದ ಎಂ.ಒ .1 ಕ್ಕೆ ಸಂಬಂಧಿಸಿದ ಮೌಲ್ಯಮಾಪಕ ಎಂದು ಹೇಳಲಾಗಿದೆ.ಪಿ.ಡಬ್ಲ್ಯು .4 ಮತ್ತು ವನ್ನು ತನಿಖಾಧಿಕಾರಿಯು ಬಂಧಿಸಿದ ಮೌಲ್ಯಮಾಪಕರೆಂದು ಹೇಳಲಾಗಿದೆ.ಆದರೆ, ಪಿ.ಡಬ್ಲ್ಯು., ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯು ದಾಖಲಿಸಿದ್ದಾರೆಂದು ಹೇಳಲಾದ ಹೇಳಿಕೆಗೆ ಬದ್ಧವಾಗಿಲ್ಲ.ಪಿ.ಡಬ್ಲ್ಯು .4 ಸಹ ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.

15. ಈ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 397 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದ್ದರೂ, ಅದನ್ನು ದಂಡ ಪ್ರಕ್ರಿಯಾ ಸಂಹಿತೆಯ 386 ನೇ ಪ್ರಕರಣದ ಅಡಿಯಲ್ಲಿನ ಅಪೀಲೆಂದು ಪರಿಗಣಿಸಬೇಕಾಗಿದೆ.ಪರಿಣಾಮವಾಗಿ, ದೂರುದಾರನು ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಒಳಗೊಂಡಂತೆ, ಪ್ರಾಸಿಕ್ಯೂಷನ್ ಮಂಡಿಸಿದ ಸಾಕ್ಷ್ಯಗಳ ಗುಣಾವಗುಣಗಳನ್ನು ಮರುವಿವೇಚಿಸಲಾಗಿದೆ.ಆದ್ದರಿಂದ, ಪಿ.ಡಬ್ಲ್ಯೂ .1 ರಿಂದ 10 ಎಂದು ಪ್ರಾಸಿಕ್ಯೂಷನ್ ಮಂಡಿಸಿದ ಎಲ್ಲಾ ಸಾಕ್ಷ್ಯಗಳ ಗುಣಾವಗುಣಗಳನ್ನು ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯವು ಸರಿಯಾದ ದೃಷ್ಟಿಕೋನದಲ್ಲಿ ಮರುವಿವೇಚಿಸುವ ಅಗತ್ಯವಿದೆ.ಆದರೆ, ಅದನ್ನು ಹಾಗೆ ಮಾಡಲಾಗಿಲ್ಲ ಎಂದು ಹೇಳಲಾಗಿದೆ.ಒಮ್ಮೆ ಸಂದೇಹದ ಲಾಭವನ್ನು 2 ನೇ ಆರೋಪಿಗೆ ನೀಡಿದಾಗ, ಅದೇ ಲಾಭವನ್ನು 1 ನೇ ಆರೋಪಿಗೂ ವಿಸ್ತರಿಸಬೇಕು.ಮೇಲೆ ಹೇಳಲಾದ ನಿರ್ಣಯದ ವಿಷಯದಲ್ಲಿ, ಆರೋಪಿಯ ಪರ ಮಾನ್ಯ ವಕೀಲರ ವಾದವನ್ನು, ಅಧಿವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪುಗಳಲ್ಲಿ ಲೋಪದೋಷಗಳು ಕಂಡುಬಂದ ಕಾರಣದಿಂದ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ಪ್ರಶ್ನಿತ ತೀರ್ಪಿನಲ್ಲಿ ಮಧ್ಯಸ್ಥಿಕೆಯನ್ನು ಕೋರಲು ಒಪ್ಪಿಕೊಳ್ಳಬೇಕಾದ ಅಗತ್ಯವಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.ಅದರಂತೆ, ನಾನು ಈ ಕೆಳಗಿನ ಆದೇಶವನ್ನು ನೀಡಬಯಸುತ್ತೇನೆ:

16. ದಂಡ ಪ್ರಕ್ರಿಯಾ ಸಂಹಿತೆಯ 401 ನೇ ಪ್ರಕರಣದೊಂದಿಗೆ ಓದಲಾದ 397 ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರ/ 1 ನೇ ಆರೋಪಿಯು ಸಲ್ಲಿಸಿದ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.ಆದ್ದರಿಂದ, ಸಿ.ಸಿ.ಸಂಖ್ಯೆ: 30/2008,ದಿನಾಂಕ: 20.7.2009 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಅದೇ ರೀತಿಯಲ್ಲಿ, ಕ್ರಿ.ಅ.ಸಂ:103/2009,ದಿನಾಂಕ: 10.5.2011 ರಲ್ಲಿನ ಅಪೀಲನ್ನು ಈ ಮೂಲಕ ರದ್ದುಪಡಿಸಲಾಗಿದೆ.ಇದರ ಪರಿಣಾಮವಾಗಿ, 1 ನೇ ಆರೋಪಿಯನ್ನು ಸಿಸಿ.ಸಂಖ್ಯೆ.30/2008 ರಲ್ಲಿ ಭಾರತ ದಂಡ ಸಂಹಿತೆಯ 420 ನೇ ಪ್ರಕರಣದ ಅಡಿಯಲ್ಲಿ ಅಪರಾಧದ ಆರೋಪಿಯನ್ನು ಖುಲಾಸೆಗೊಳಿಸಿದೆ.ಠೇವಣಿ ಇಟ್ಟ ದಂಡದ ಮೊತ್ತವನ್ನು, ಸರಿಯಾದ ಗುರುತಿನ ಆಧಾರದ ಮೇಲೆ ಆರೋಪಿಗೆ ಹಿಂದಿರುಗಿಸತಕ್ಕದ್ದು.